ಶ್ರೀ ಟಿ. ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನಾ ಸಚಿವರು):–

(ಅ) ಒಂದು ದೂರು ಬಂದಿದ್ದು, ಪರಿಶೀಲಿಸಲು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಕಳುಹಿಸಲಾಗಿತ್ತು. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಪರಿಶೀಲಿಸಿ, ಆ ದೂರಿನಲ್ಲಿ ಯಾವುದೇ ತಿರುಳಿಲ್ಲವೆಂದು ತಿಳಿಸಿದೆ.

(ಆ) ಉದ್ಭವಿಸುವುದಿಲ್ಲ.

(ಇ) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ನಡೆಸುವ ಕಾನೂನು ಪದವಿ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದ ಪ್ರತಿಶತ 57 ವಿದ್ಯಾರ್ಥಿಗಳು ಮತ್ತು ಆಂಗ್ಲ ಮಾಧ್ಯಮದಲ್ಲಿ ಪರೀಕ್ಷೆ ಬರೆದ ಪ್ರತಿಶತ 64 ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದಾಗಿ ತಿಳಿದು ಬಂದಿದೆ. ಈ ಫಲಿತಾಂಶದಿಂದ ಕನ್ನಡ ಮಾಧ್ಯಮದಲ್ಲಿ ಕಾನೂನು ಪದವಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿರುವುದು ಕಂಡುಬರುವುದಿಲ್ಲ. ಆದಾಗ್ಯೂ ಸಮಸ್ಯೆ ಇದೆಯೇ ಎಂಬುದನ್ನು ಪೂರ್ಣವಾಗಿ ಅಭ್ಯಸಿಸಲು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಪ್ರಶಾಸನ ಸಭೆಯು 3 ಸದಸ್ಯರ ಒಂದು ಸಮಿತಿಯನ್ನು ರಚಿಸಿದೆ.

(ಈ)ಮತ್ತು(ಉ) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ರಚಿಸಿರುವ ಸಮಿತಿಯು ವರದಿಯನ್ನಾಧರಿಸಿ ಕ್ರಮ ಜರುಗಿಸಲಾಗುವುದು.

ವಿಧಾನಸೌಧಕ್ಕೆ ಸಾರ್ವಜನಿಕರ ಪ್ರವೇಶಾತಿ ನಿಯಮ ಸಡಿಲೀಕರಿಸುವುದು

617 (1037) ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) :– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ವಿಧಾನಸೌಧಕ್ಕೆ ಪ್ರವೇಶಿಸುವ ಸಾರ್ವಜನಿಕರಿಗೆ ಪ್ರವೇಶಾತಿ ನೀಡಲು ಕಠಿಣ ಕ್ರಮಗಳನ್ನು ಕೈಗೊಂಡಿರುವುದು ನಿಜವೇ ;

(ಆ) ಇದರಿಂದಾಗಿ 700–800 ಕಿ.ಮೀ ವ್ಯಾಪ್ತಿಯಿಂದ ಬರುವ ಸಾರ್ವಜನಿಕರು ಸರ್ಕಾರದ ಕಛೇರಿಗಳಿಗೆ, ಸಚಿವರು, ಶಾಸಕರನ್ನು ಭೇಟಿ ಮಾಡಲು ಕಷ್ಟಕರವಾಗುವುದಿಲ್ಲವೇ ;

(ಇ) ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿ: ತಾವೇ ಆಯ್ಕೆ ಮಾಡಿದ ಶಾಸಕರು, ಸಚಿವರನ್ನು ಭೇಟಿ ಮಾಡುವುದಕ್ಕೆ ಜನರು ಕಷ್ಟ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕೆಲವೊಮ್ಮೆ ಗುರುತಿನ ಚೀಟಿ ಇರದೇ ಇರುವ ಸಾರ್ವಜನಿಕರಿಗೆ ಪ್ರವೇಶಾತಿ ಕಷ್ಟಕರವಾಗುತ್ತಿರುವುದು ನಿಜವೇ ;

(ಉ)ಹಾಗಿದ್ದಲ್ಲಿ, ವಿಧಾನಸೌಧಕ್ಕೆ ಸಾರ್ವಜನಿಕರು ಕೆಲಸ ಕಾರ್ಯಗಳ ನಿಮಿತ್ತ ಹಾಗೂ ಅಧಿಕಾರಿಗಳು, ಶಾಸಕರು, ಸಚಿವರನ್ನು ಭೇಟಿ ಮಾಡಲು ಇರುವ ನಿರ್ಬಂಧಗಳನ್ನು ಸ್ವಲ್ಪ ಮಟ್ಟಿಗೆ ಸರಳೀಕರಣಗೊಳಿಸಲಾಗುವುದೇ ;

(ಊ)ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ? (ವಿವರ ನೀಡುವುದು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) :-

(ಅ) ವಿಧಾನಸೌಧದ ಸುರಕ್ಷತೆ, ಭದ್ರತೆ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ವಿಧಾನಸೌಧಕ್ಕೆ ಬರುವ ಸಾರ್ವಜನಿಕರ ಪ್ರವೇಶವನ್ನು ನಿಯಂತ್ರಿಸುವ ಸಂಬಂಧ ಕೆಲವು ಕ್ರಮಗಳನ್ನು ಕೈಗೊಳ್ಳಲಾಗಿದೆ.

(ಆ) ಸಾರ್ವಜನಿಕ ಸಂದರ್ಶಕರ ಸಮಯದಲ್ಲಿ ಸ್ವಾಗತ ಕೇಂದ್ರದಿಂದ ಅನುಮತಿ ಪತ್ರ ಪಡೆದು ಪ್ರವೇಶಿಸಲು ಅವಕಾಶವಿರುತ್ತದೆ.

(ಇ) ಮಾನ್ಯ ಸಚಿವರುಗಳ ಆಪ್ತ ಕಾರ್ಯದರ್ಶಿಯವರು ಪ್ರವೇಶಾನುಮತಿ ನೀಡಬೇಕೆಂದು ಪತ್ರ ನೀಡಿದಲ್ಲಿ ಯಾರಿಗೆ ಪತ್ರವನ್ನು ನೀಡಲಾಗಿದೆಯೋ ಆ ವ್ಯಕ್ತಿಗೆ ಪ್ರವೇಶ ಅನುಮತಿ ನೀಡಲಾಗುತ್ತಿದೆ.

(ಈ) ಭಾವಚಿತ್ರವಿರುವ ಮತದಾರರ ಗುರುತಿನ ಚೀಟಿ, ಪಾನ್‌ಕಾರ್ಡ್, ಡಿ.ಎಲ್, ಆಧಾರ್‌ಕಾರ್ಡ್ ಇತ್ಯಾದಿಗಳಲ್ಲಿ ಯಾವುದಾದರು ಒಂದನ್ನು ಒದಗಿಸಲು ಸೂಚಿಸಲಾಗುತ್ತಿದ್ದು ಒಂದು ವೇಳೆ ಯಾವುದೇ ಗುರುತಿನ ಚೀಟಿಗಳು ಲಭ್ಯವಿಲ್ಲದಿದ್ದಲ್ಲಿ ವಿಚಾರಿಸಿ ವಿಧಾನಸೌಧ ಒಳ ಪ್ರವೇಶಿಸಲು ಪ್ರವೇಶದ್ವಾರಗಳಲ್ಲಿ ಅನುಮತಿ ನೀಡಲಾಗುತ್ತಿದೆ.

(ಉ)ಸಾರ್ವಜನಿಕ ಸಂದರ್ಶನ ವೇಳೆಯನ್ನು ಹೊರತುಪಡಿಸಿ ಬೇರೆ ಸಮಯದಲ್ಲಿ ಸಂದರ್ಶಕರ ಪ್ರವೇಶವನ್ನು ಕೋರಿ ಮಾನ್ಯ ಸಚಿವರ ಕಛೇರಿಗಳು ಮಾನ್ಯ ವಿಧಾನ ಸಭಾಧ್ಯಕ್ಷರ ಹಾಗೂ ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಗಳ ಕಛೇರಿಗಳು ಲಿಖಿತ ಮೂಲಕ ಕೋರಿಕೆಗಳನ್ನು ಸಲ್ಲಿಸಿದಲ್ಲಿ ಅಂತಹ ವ್ಯಕ್ತಿಗಳಿಗೆ ವಿಧಾನಸೌಧ ಪ್ರವೇಶಿಸಲು ಅನುಮತಿ ನೀಡಲಾಗುತ್ತಿದೆ.

(ಊ) ಸುರಕ್ಷತೆ ಹಾಗೂ ಭದ್ರತೆ ದೃಷ್ಟಿಯಿಂದ ಈಗ ಇರುವ ನಿರ್ಬಂಧಗಳನ್ನು ಪಾಲಿಸಲು ಸಾರ್ವಜನಿಕರು ಸಹಕರಿಸಬೇಕಾಗಿರುತ್ತದೆ.